ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ ನಂಬರ್ಃ **1735/2023**

ಪಿರ್ಯಾದಿ : ರಾಜ್ಯ, ಪರವಾಗಿ ಬಾಳೂರು ಪೊಲೀಸರು,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿತರು : **1.** ಚಂದ್ರೇಗೌಡ.ಟಿ.ಎಂ,
ಬಿನ್ ದಿಃ ಮಂಜೇಗೌಡ,
ವಯಸ್ಸು ಸುಮಾರು 35 ವರ್ಷ.

**2.** ಮಂಜೇಗೌಡ ಬಿನ್ ದಿಃ ಮಂಜೇಗೌಡ,
ವಯಸ್ಸು ಸುಮಾರು 47 ವರ್ಷ.

ಇಬ್ಬರ ವಾಸಃ ಎನ್.ತಿಮ್ಮನಹಳ್ಳಿ ಗ್ರಾಮ,
ಕಾರ್ಜುವಳ್ಳಿ ಅಂಚೆ, ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

**3.** ಚಂದ್ರಶೇಖರ.ಹೆಚ್.ಪಿ ಬಿನ್ ದಿಃ ಪುಟ್ಟಸ್ವಾಮಿಗೌಡ,
ವಯಸ್ಸು ಸುಮಾರು 28 ವರ್ಷ,
ವಾಸಃ ಹರಿಹರಪುರ, ಸಮುದ್ರಹಳ್ಳಿ ಗ್ರಾಮ,
ವಾಟೆಪೊಳೆ ಅಂಚೆ, ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ..

* * * * *

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ರವರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 2) ಪ್ರಾಸಾ 1 ಶ್ರೀನಾಥ್ ರೆಡ್ಡಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ10.07.2023 ರಂದು ರಾತ್ರಿ 12 ಗಂಟೆಗೆ ಜಾವಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಅಶೋಕ್ ಲೇಲ್ಯಾಂಡ್ ಗೂಡ್ಸ ವಾಹನವನ್ನು ನಿಲ್ಲಿಸಿಕೊಂಡು, ಕೆಲವು ವ್ಯಕ್ತಿಗಳು, ದನಗಳನ್ನು ಕಳ್ಳತನ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 3) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರ ಆದಾರದ ಮೇಲೆ ಠಾಣೆಗೆ ಬಂದು, ಠಾಣೆಯಲ್ಲಿ ಹಾಜರಿದ್ದ, ಚಾಸಾ-6 ರಿಂದ 8 ರವರಿಗೆ ಮಾಹಿತಿ ವಿಚಾರವನ್ನು ತಿಳಿಸಿ,

ತನ್ನೊಂದಿಗೆ ಅವರನ್ನು ಕರೆದುಕೊಂಡು, ತಮ್ಮ ಇಲಾಖಾ ವಾಹನದಲ್ಲಿ, ರಾತ್ರಿ 12.10 ಗಂಟೆಗೆ ಠಾಣೆಯಿಂದ ಹೊರಟು, 12.30 ಗಂಟೆಗೆ ಜಾವಳಿ ಗ್ರಾಮವನ್ನು ತಲುಪಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 4) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಕಾಲಕ್ಕೆ ಅಲ್ಲಿಯೇ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಾಸಾ-2 ಮತ್ತು 3 ರವರಿಗೆ ಬಾತ್ಮಿ ವಿಚಾರ ತಿಳಿಸಿ ಪಂಚರಾಗಿ ನೇಮಕ ಮಾಡಿಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 5) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಎಲ್ಲರೂ ಸೇರಿ, 12.45 ಗಂಟೆಗ ಜಾವಳಿ ಬಸ್ ನಿಲ್ದಾಣದ ಹತ್ತಿರ ಹೋಗಿ ನೋಡಲಾಗಿ, ಅಂಚೆ ಕಚೇರಿಯ ಮುಂಭಾಗದ ರಸ್ತೆಯಲ್ಲಿ ಒಂದು ಅಶೋಕ್ ಲೇಲಾಂಡ್ ವಾಹನ ನಿಲ್ಲಿಸಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 6) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಲ್ಲಿಯೇ ಸುಮಾರು 4 ರಿಂದ 5 ಕಪ್ಪು, ಕಂದು ಮಿಶ್ರಿತ ದನಗಳು ಇದ್ದು, ಒಂದು ದನವನ್ನು 3 ಜನರು ವಾಹನಕ್ಕೆ ತುಂಬುತ್ತಿರುವುದು ಕಂಡುಬಂದಿರುತ್ತದೆ. ನಂತರ ಎಲ್ಲರೂ ದಾಳಿ ಮಾಡಿ, ಸದರಿ 3 ವ್ಯಕ್ತಿಗಳನ್ನು ಹಿಡಿದಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 7) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರನ್ನು ವಿಚಾರಿಸಲಾಗಿ ಸದರಿರವರು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ನಂತರ ವಿಚಾರಿಸಲಾಗಿ, ಸದರಿ ದನಗಳು ರಸ್ತೆಯ ಪಕ್ಕದಲ್ಲಿ ಮಲಗಿದ್ದು ಅವುಗಳನ್ನು ಕಳ್ಳತನದಿಂದ ಕದ್ದು ಸಾಗಾಣಿಕೆ ಮಾಡಿಕೊಂಡು, ಸಂತೆಯಲ್ಲಿ ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ವಾಹನಕ್ಕೆ ತುಂಬುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 8) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-4 ಮತ್ತು 5

ರವರನ್ನು ಸದರಿ ದನಗಳ ಬಗ್ಗೆ ವಿಚಾರಿಸಲಾಗಿ, ಅವುಗಳು ಬಿಡಾಡಿ ದನಗಳು ಎಂದು, ಜಾವಳಿ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಮಲಗಿರುತ್ತವೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 9) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಅದರ ವಾಹನ ನೋಂದಣಿ ಸಂ.ಕೆಎ-13-9436 ಎಂದು ಇದ್ದು ಹಳದಿ ನಂಬರ್ ಪ್ಲೇಟ್ ಹೊಂದಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 10) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ವಾಹನವು ಕ್ರೀಮ್ ಕಲರ್ ನ ವಾಹನವಾಗಿದ್ದು, ಹಿಂಬದಿಯಲ್ಲಿ ಒಂದು ಕಪ್ಪು ಬಣ್ಣದ ಹೋರಿ ಹಾಗೂ ಕಂದು ಬಣ್ಣದ ಹಸು ಕಂಡುಬಂದಿರುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 11) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಹಸುಗಳನ್ನು ಕಟ್ಟಲು ಉಪಯೋಗಿಸಿದ ಹಗ್ಗಗಳು ಸಹ ಕಂಡುಬಂದಿದ್ದು, ನಂತರ ವಾಹನ, ಆರೋಪಿತರು, ಹಸುಗಳು, ಹಗ್ಗಗಳನ್ನು ಪಂಚರ ಸಮಕ್ಷಮ ನಿಯಮಾನುಸಾರ ಜಪ್ತು ಮಾಡಿಕೊಂಡು, ಮಧ್ಯ ರಾತ್ರಿ 1 ಗಂಟೆಯಿಂದ 2.30 ರ ಅವದಿಯಲ್ಲಿ ಮಹಜರು ಮಾಡಿ, ಫೋಟೋಗಳನ್ನು ತೆಗೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 12) ಫ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಕಾಲಕ್ಕೆ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಸಹ ತಯಾರಿಸಿ, ತದನಂತರ 2.45 ಗಂಟೆಗೆ ಠಾಣೆಗೆ ಹಾಜರಾಗಿ, ಮುಂದಿನ ಕ್ರಮಕ್ಕೆ ಎಸ್.ಹೆಚ್.ಓ ರವರಿಗೆ ಸರ್ಕಾರಿ ತರ್ಫೆ ದೂರು, ಮುದ್ದೆಮಾಲುಗಳು ಮತ್ತು ಆರೋಪಿತರನ್ನು ಅವರ ವಶಕ್ಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 13) ಫ್ರಾಸಾ 2 ಮಧುಸೂಧನ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.10.07.2023 ರಂದು ಮ.ರಾ.12.35 ರ ಸಮಯಕ್ಕೆ ತಾನು ಮತ್ತು ಚಾಸಾ-2 ರವರು ಜಾವಳಿ ಬಸ್ ಸ್ಟಾಪ್ ಬಳಿ

ಹೋಗುತ್ತಿರುವಾಗ ಚಾಸಾ-1 ರವರು ಅವರನ್ನು ಕರೆದು ಮಹಜರ್ ಗೆ ಸಹಕರಿಸುವಂತೆ ಕೋರಿ ನೋಟೀಸು ಕೊಟ್ಟಿದ್ದು, ತಾನು ಮತ್ತು ಚಾಸಾ-2 ರವರು ಒಪ್ಪಿ ನೋಟೀಸ್ ಗೆ ಸಹಿ ಮಾಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 14) ಫ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರು, KA-13-C-9634 ಅಶೋಕ್ ಲೇ ಲ್ಯಾಂಡ್ ಗೂಡ್ಸ ವಾಹನ ಮತ್ತು ಸದರಿ ವಾಹನದ ಒಳಗೆ ಒಂದು ಕಪ್ಪು ಬಣ್ಣದ ಹೋರಿ, ಒಂದು ಕಂದು ಬಣ್ಣದ ಹಸು, 4 ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗ ಮತ್ತು 5 ½ ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗ ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 15) ಫ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಸ್ತುಗಳೊಂದಿಗೆ ಅವರನ್ನು ನಿಲ್ಲಿಸಿ ಫೋಟೋ ತೆಗೆದು ಮ.ರಾ.1.00 ರಿಂದ 2.30 ರವರೆಗೂ ಮಹಜರ್ ಕ್ರಮ ಜರುಗಿಸಿ ಸದರಿ ವಸ್ತುಗಳು ಹಾಗೂ ಆರೋಪಿತರನ್ನು ವಶಕ್ಕೆ ಪಡೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 16) ಫ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜಾವಳಿ ಬಸ್ ಸ್ಟ್ಯಾಂಡ್ ಬಳಿ ಪಕ್ಕದ ರಸ್ತೆಯಲ್ಲಿ ಇದ್ದ ದನಗಳನ್ನು ಆರೋಪಿತರು ಮಾಂಸ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಲು ತುಂಬಿಕೊಂಡಿರುವುದಾಗಿ ಚಾಸಾ-1 ರವರು ಅವರುಗಳಿಗೆ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 17) ಫ್ರಾಸಾ 3 ಪ್ರಮೋದ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.10.07.2023 ರಂದು ಮಧ್ಯ ರಾತ್ರಿ 1 ಗಂಟೆ ಸಮಯಕ್ಕೆ ಚಾಸಾ-4 ರವರು ತನಗೆ ಕರೆ ಮಾಡಿ ಜಾವಳಿಯ ಕೆನರಾ ಬ್ಯಾಂಕ್ ಮುಂದೆ ದನ ಕಳ್ಳತನ ಆಗುತ್ತಿದೆ ಎಂದು ತನ್ನನ್ನು ಬರುವಂತೆ ಕರೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 18) ಫ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸ್ಥಳಕ್ಕೆ ತಾನು ರಾ.1.15 ರ ಸಮಯಕ್ಕೆ ಹೋಗಿ ನೋಡಿದಾಗ ಅಲ್ಲಿ ಆರೋಪಿತರು, ಪೋಲಿಸರು ಮತ್ತು ಅಶೋಕ ಲೇಲ್ಯಾಂಡ್ ವಾಹನ ಇತ್ತು. ಸದರಿ ವಾಹನದಲ್ಲಿ 3-4 ದನಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 19) ಫ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪೋಲಿಸರು ಮಹಜರ್ ಮಾಡಿ ಹಗ್ಗ, ವಾಹನ, ಗೋಣೀಚೀಲಗಳು, ದನಗಳು ಮತ್ತು ಆರೋಪಿತರನ್ನು ವಶಕ್ಕೆ ಪಡೆದರು. ಮಹಜರ್ ಗೆ ತನ್ನ ಸಹಿಯನ್ನು ಸಹಾ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 20) ಫ್ರಾಸಾ 4 ಜಾಫರ್ ಶರೀಫ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.10.07.2023 ರಂದು ತಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಬೆಳಗ್ಗಿನ ಜಾವ 3.15 ರ ಸಮಯಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ವರದಿ, ಮಹಜರ್ ಮತ್ತು ಮುದ್ದೆಮಾಲನ್ನು ಸ್ವೀಕರಿಸಿ, ಠಾ.ಮೊ.ಸಂ.24/2023 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 21) ಫ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಹಾಜರುಪಡಿಸಿದ್ದ ಒಂದು ಕಪ್ಪು ಬಣ್ಣದ ಹೋರಿ, ಕಂದು ಬಣ್ಣದ ಒಂದು ಹಸು, KA-13-C-9634 ನೊಂದಣಿ ಸಂಖ್ಯೆಯ ಅಶೋಕ್ ಲೇಲ್ಯಾಂಡ್ ವಾಹನ, 4 ಮೀಟರ್ ಉದ್ದದ ಹಳದಿ ಬಣ್ಣದ ಹಗ್ಗ ಮತ್ತು 5½ ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗವನ್ನು ಠಾ.ಮಾ.ಸಂ.30/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 22) ಫ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿತರನ್ನು ನಿಯಮಾನುಸಾರ ದಸ್ತಗಿರಿ ಮಾಡಿ ಅವರ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು, ಅದೇದಿನ

ಚಾಸಾ-2 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿ, ನಂತರ ಆರೋಪಿತರನ್ನು ರಿಮ್ಯಾಂಡ್ ಮನವಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 23) ಫ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದ ಆದೇಶದಂತೆ ಪ್ರಕರಣದಲ್ಲಿ ವಶಕ್ಕೆ ಪಡೆಯಲಾದ ಎರಡು ಗೋವುಗಳನ್ನು ಅರಸೀಕೆರೆಯ ಕುಸ್ತೂರಬಾ ಗೋಶಾಲೆಗೆ ಚಾಸಾ-13 ರವರ ಮೂಲಕ ಹಸ್ತಾಂತರಿಸಿ, ದಿ.17.07.2023 ರಂದು ಚಾಸಾ-15 ರವರಿಗೆ ಪತ್ರ ಬರೆದು, ದಾಳಿ ಕಾಲಕ್ಕೆ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ದೃಢೀಕರಣ ನೀಡುವಂತೆ ಕೋರಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 24) ಫ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.23.07.2023 ರಂದು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಕಲಂ.5, 12(2) ನ್ನು ತನಿಖೆಗೆ ಅಳವಡಿಸಿಕೊಳ್ಳಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಮನವಿ ಪತ್ರ ನಿವೇದಿಸಿಕೊಂಡು ಅನುಮತಿ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 25) ಫ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ವೃತ್ತ ನಿರೀಕ್ಷಕರಿಗೆ ಪತ್ರ ಬರೆದುಕೊಂಡು PSI ದರ್ಜೆಯ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಕ ಮಾಡುವಂತೆ ಪತ್ರ ಬರೆದು, ದಿ.21.08.2023 ರಂದು CPI ರವರ ಆದೇಶದಂತೆ ಪ್ರಕರಣದ ಕಡತವನ್ನು ಚಾಸಾ-18 ರವರಿಗೆ ಮುಂದಿನ ತನಿಖೆ ಸಂಬಂಧ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 26) ಫ್ರಾಸಾ 5 ಹರ್ಷವರ್ಧನ್.ಹೆಚ್.ಕೆ ರವರು ತಮ್ಮ ಸಾಕ್ಷ್ಯದಲ್ಲಿ ದಿ.23.08.2023 ರಂದು ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಮುಂದಿನ ತನಿಖೆ ಸಂಬಂಧ ಸ್ವೀಕರಿಸಿ,. ದಿ.30.08.2023 ರಂದು ಚಾಸಾ-15 ರವರಿಂದ ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ದೋ.ಪ.ಯನ್ನು ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 27) ಫ್ರಾಸಾ 6 ಮಂಜುನಾಥ್.ಬಿ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.10.07.2023 ರಂದು ರಾ.12.00 ರ ಸಮಯದಲ್ಲಿ ಗಸ್ತು ಕಾರ್ಯಾಚಾರಣೆಯಲ್ಲಿ ಇರುವಾಗ ಚಾಸಾ-1 ರವರು ಕರೆ ಮಾಡಿ ಠಾಣೆಗೆ ಹಾಜರಾಗುವಂತೆ ತಿಳಿಸಿದ ಮೇರೆಗೆ ತಾನು ಮತ್ತು ಚಾಸಾ-8 ರವರು ಠಾಣೆಗೆ ಹಾಜರಾಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 28) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಜಾವಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಯಾರೋ ವ್ಯಕ್ತಿಗಳು ವಾಹನವನ್ನು ನಿಲ್ಲಿಸಿಕೊಂಡು ಅಕ್ರಮವಾಗಿ ಗೋವುಗಳನ್ನು ಕಳ್ಳತನ ಮಾಡಿ ವಾಹನಕ್ಕೆ ತುಂಬುತ್ತಿರುವುದಾಗಿ ಮಾಹಿತಿ ಬಂದಿರುವುದನ್ನು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 29) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರಂತೆ ತಾನು ಮತ್ತು ಚಾಸಾ-8 ರವರು ಇಲಾಖಾ ಜೀಪಾದ KA-18-G-755 ವಾಹನದಲ್ಲಿ, ಚಾಲಕನಾದ ಚಾಸಾ-7 ಮತ್ತು ಚಾಸಾ-1 ರವರೊಟ್ಟಿಗೆ ರಾ.12.10 ರ ಸಮಯಕ್ಕೆ ಠಾಣೆಯಿಂದ ಹೊರಟು ಜಾವಳಿ ಗ್ರಾಮದ ರಸ್ತೆಯ ಬಳಿ ಬಂದು ನೋಡಲಾಗಿ ಇಬ್ಬರು ವ್ಯಕ್ತಿಗಳು ನಡೆದುಕೊಂಡು ಹೋಗುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 30) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವ್ಯಕ್ತಿಗಳಿಗೆ ಚಾಸಾ-1 ರವರು ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಿ ಪಂಚರಾಗಿ ಹಾಜರಾಗುವಂತೆ ಕೋರಿಕೊಂಡ ಮೇರೆಗೆ ಅವರಿಗೆ ನೋಟೀಸನ್ನು ಜಾರಿ ಮಾಡಿ ಸದರಿ ವ್ಯಕ್ತಿಗಳನ್ನು ನಮ್ಮೊಟ್ಟಿಗೆ ಇಲಾಖೆ ಜೀಪ್ ನಲ್ಲಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 31) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸ್ಥಳಕ್ಕೆ ಹೋಗಿ ನೋಡಲಾಗಿ ಸಮವಸ್ತ್ರದಲ್ಲಿದ್ದ ಅವರುಗಳನ್ನು ನೋಡಿ ಹಸುಗಳನ್ನು ಅಕ್ರಮವಾಗಿ ತುಂಬುತಿದ್ದ ವ್ಯಕ್ತಿಗಳು ಓಡಲು ಪ್ರಯತ್ನಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 32) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರುಗಳಲ್ಲಿ ಒಬ್ಬ ವ್ ಯಕ್ತಿಯನ್ನು ಹಿಡಿದು ಚಾಸಾ-1 ರವರ ಬಳಿ ಹಾಜರುಪಡಿಸಿ ಅವರನ್ನು ವಿಚಾರಿಸಲಾಗಿ ಅವರ ಹೆಸರು ಚಂದ್ರೇಗೌಡ ಬಿನ್ ಮಂಜೇಗೌಡ, ತಿಮ್ಮೇನಹಳ್ಳಿ ಗ್ರಾಮದ ಹಾಲುರು ತಾಲ್ಲೂಕು ವಾಸಿ ಎಂದು ತಿಳಿದು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 33) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರೊಟ್ಟಿಗಿದ್ದ ಚಾಸಾ-8 ಮತ್ತು 7 ರವರು ಇನ್ನು ಇಬ್ಬರು ವ್ಯಕ್ತಿಗಳನ್ನು ಹಿಡಿದು ತಂದು ಹಾಜರುಪಡಿಸಿ ಅವರನ್ನು ವಿಚಾರಿಸಲಾಗಿ ಅದರಲ್ಲಿ ಒಬ್ಬ ವ್ಯಕ್ತಿಯ ಹೆಸರು ಮಂಜೇಗೌಡ ಬಿನ್ ಮಂಜೇಗೌಡ, ತಿಮ್ಮನಹಳ್ಳಿಯ ವಾಸಿ ಮತ್ತು ಚಂದ್ರಶೇಖರ್, ಆಲೂರು ತಾಲ್ಲೂಕಿನ ಪಾಳ್ಯ ಎಂಬ ಗ್ರಾಮದ ವಾಸಿ ಎಂದು ತಿಳಿದು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 34) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ವಾಹನದ ಬಳಿ ಬಂದು ಪರಿಶೀಲಿಸಲಾಗಿ ವಾಹನದ ಒಳಗೆ ಒಂದು ಕಪ್ಪು ಬಣ್ಣದ ಹೋರಿ ಮತ್ತು ಕಂದು ಬಣ್ಣದ ಒಂದು ಹಸು ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 35) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಆರೋಪಿಗಳಿಗೆ ಈ ರೀತಿಯಾಗಿ ಹಸುಗಳನ್ನು ತುಂಬಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಸದರಿಯವರು ಯಾವುದೇ ಪರವಾನಿಗೇ ಇಲ್ಲದಿರುವುದು ತಿಳಿದು ಬಂದಿರುತ್ತದೆ ಮತ್ತು ಸದರಿಯವರು ರಸ್ತೆಯ ಬಳಿ ಮಲಗಿರುವಂತಹ ಹಸುಗಳನ್ನು ಕಳ್ಳತನ ಮಾಡಿ ಹಾಸನದ ಸಂತೆಗೆ ಮಾರಾಟ ಮಾಡಲು ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 36) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವುಗಳಲ್ಲಿ ಒಂದು ಕಪ್ಪು ಬಣ್ಣದ 2

ರಿಂದ 3 ವರ್ಷದ ಹೋರಿ ಮತ್ತು ಕಂದು ಬಣ್ಣದ 2 ರಿಂದ 3 ವರ್ಷದ ಹಸು, ಅಶೋಕ್ ಲೇಲೆಂಡ್ ಎಂಬ ವಾಹನದಲ್ಲಿ ತುಂಬಿರುತ್ತಾರೆ. ನಂತರ ಸದರಿ ವ್ಯಕ್ತಿಗಳು ಸದರಿ ಜಾನುವಾರಗಳಿಗೆ ಸರಿಯಾದ ರೀತಿಯಲ್ಲಿ ನೀರು ಮತ್ತು ಮೇವನ್ನು ನೀಡದಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 37) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಮಹಜರ್ ಕ್ರಮವನ್ನು ಜರುಗಿಸಿ ಹಸುಗಳು, ಹಗ್ಗ ಮತ್ತು ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಬೀದಿ ದೀಪದ ಸಹಾಯದಿಂದ ಮಹಜರ್ ಕ್ರಮವನ್ನು ರಾ.1.00 ರಿಂದ 2.00 ರ ಸಮಯದವರೆಗು ಬರೆಯಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 38) ಫ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಠಾಣೆಗೆ ಬಂದು ಹಾಜರಾಗಿ ಚಾಸಾ-17 ರವರಿಗೆ ವರದಿಯೊಟ್ಟಿಗೆ ಮಹಜರ್ ಪ್ರತಿ ಮತ್ತು ಅಮಾನತುಪಡಿಸಿಕೊಂಡಂತಹ ಹಸುಗಳು ಮತ್ತು ವಸ್ತುಗಳನ್ನು ಹಾಜರುಪಡಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 39) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

1 ರಿಂದ 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 40) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

1 ರಿಂದ 3 ನೇ ಆರೋಪಿತರ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೀನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ.
ದಿನಾಂಕಃ 06.01.2026.

C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.